ಶ್ರೀ ಜಿ. ರಾಜಂಗೌಡ.— ೧೯೮೮-೮೯ರಲ್ಲಿ ಎಷ್ಟು ಕಾರ್ಖಾನೆಗಳು ಲಾಭವನ್ನು ಗಳಿಸಿವೆ ಮತ್ತು ಎಷ್ಟು ಕಾರ್ಖಾನೆಗಳು ನಷ್ಟವನ್ನು ಅನುಭವಿಸಿವೆ ಎಂಬ ವಿವರಗಳನ್ನು ತಿಳಿಸುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.— ೧೯೮೮-೮೯ನೇ ಸಾಲಿನಲ್ಲಿ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳು ಲಾಭವನ್ನು ಗಳಿಸಿವೆ. ಮತ್ತು ಕೆಲವು ನಷ್ಟವನ್ನೂ ಹೊಂದಿವೆ. ಅದರ ವಿವರ ಈ ರೀತಿ ಇದೆ.

೧)	ಕಂಪ್ಲಿ	...	ಲಾಭ	೧೬.೭೯ ಲಕ್ಷ ರೂ.
೨)	ಪಾಂಡವಪುರ	...	ಲಾಭ	೫೦.೩೩ ಲಕ್ಷ ರೂ.
೩)	ಹಿರಣ್ಯಕೇಶಿ	...	ಲಾಭ	೧೦.೩೪ ಲಕ್ಷ ರೂ.
೪)	ಬೀದರ್	...	ಲಾಭ	೧೧೩.೧೦ ಲಕ್ಷ ರೂ.
೫)	ಚಿಕ್ಕೋಡಿ	...	ಲಾಭ	೨೧೨.೧೮ ಲಕ್ಷ ರೂ.
೬)	ಮಲಪ್ರಭ	...	ಲಾಭ	೬೭.೨೦ ಲಕ್ಷ ರೂ.
೭)	ರಾಯಭಾಗ್	...	ಲಾಭ	೧೭೬.೭೯ ಲಕ್ಷ ರೂ.
೮)	ಭದ್ರಾ	. .	ಲಾಭ	೬೬.೪೫ ಲಕ್ಷ ರೂ.
೯)	ಗೋಕಾಕ್	...	ಲಾಭ	೮೯.೪೮ ಲಕ್ಷ ರೂ.
೧೦)	ಶ್ರೀ ಶ್ರೀರಾಮ	...	ನಷ್ಟ	೯೦.೧೫ ಲಕ್ಷ ರೂ.
೧೧)	ಹೇಮಾವತಿ	...	ಲಾಭ	೧೩.೪೬ ಲಕ್ಷ ರೂ.
೧೨)	ದಕ್ಷಿಣ ಕನ್ನಡ	...	ನಷ್ಟ	೪೪.೯೩ ಲಕ್ಷ ರೂ.
೧೩)	ಪಾಲಸಿದ್ಧನಾಥ	...	ಲಾಭ	೭೧.೩೨ ಲಕ್ಷ ರೂ
೧೪)	ಕರ್ನಾಟಕ	...	ಲಾಭ	೭೬.೬೮ ಲಕ್ಷ ರೂ.
೧೫)	ಅಳಂದ್	...	ನಷ್ಟ	೪೬.೮೦ ಲಕ್ಷ ರೂ.

ಶ್ರೀ ಜಿ. ರಾಜುಗೌಡ.— ೩—೪ ಕಾರ್ಖಾನೆಗಳಲ್ಲಿ ನಷ್ಟವಾಗಿದೆಯೆಂದು ಹೇಳಿದಿರಿ. ಈ ಕಾರ್ಖಾನೆಗಳಲ್ಲಿ ಸರ್ಕಾರದ ಷೇರು ಬಂಡವಾಳ ಎಷ್ಟು ಹಾಕಿದ್ದೀರಿ ? ಎಷ್ಟಕ್ಕೆ ಜಾಮೀನು ಕೊಟ್ಟಿದ್ದೀರೆಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.— ಈ ವಿವರಗಳು ಈಗ ನನ್ನಲ್ಲಿಲ್ಲ. ಅದನ್ನು ತರಿಸಿ ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ

೧೪೪. ಶ್ರೀ ಬಸವಂತರೆಡ್ಡಿ (ಸೇಡಂ).— ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಪಾಖಿಲ್, ಸೀಲಾರಕೋಟಿ, ಹೊಸಹಳ್ಳಿ, ಕೃಷ್ಣಾಪುರ, ತೆಲಕೂರ, ನಾಡಪಲ್ಲಿ, ಬೆನಕನಹಳ್ಳಿ, ತೊಲ್ಮಾಮಿಡಿ ಶಕಲಾತ್‌ಹಳ್ಳಿ, ಮೆದಕ್ ಮತ್ತು ಶಂಕರ ರಾಜ್‌ಪುರ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಶಾಶ್ವತವಾಗಿ ನಿವಾರಿಸಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಬಿ. ಬಸವಲಿಂಗಪ್ಪ. (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳು).—

ಅ) ಬಂದಿದೆ.

ಆ) ಆಯಾ ಗ್ರಾಮದ ಅವಶ್ಯಕತೆಯನ್ನು ಪರಿಗಣಿಸಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ವ್ಯವಸ್ಥೆ ಮಾಡಲಾಗುವುದು.

ಶ್ರೀ ಬಸವಂತರೆಡ್ಡಿ.—ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಕೇಳಿರತಕ್ಕ ಎಲ್ಲಾ ಗ್ರಾಮಗಳಲ್ಲೂ ಕೆರು ನೀರು ಸರಬರಾಜು ಯೋಜನೆ ಮಂತ್ರಿ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು ಮಂಜೂರು ಆಗಿ ಸುಮಾರು ೩—೪ ವರ್ಷಗಳಾಗಿದೆ. ಆದರೆ ಇದುವರೆಗೂ ಅವು ಕಾರ್ಯಗತವಾಗಿಲ್ಲ. ಇದರಿಂದ

ಅಲ್ಲಿಯ ಜನರಿಗೆ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ತೊಂದರೆಯಾಗಿದೆ. ನಾನು ೮೮-೮೯ರ ಸಾಲಿನಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಈ ಬಗ್ಗೆ ಪ್ರಶ್ನೆಯನ್ನು ಕೇಳಿದಾಗ ನಾವು ಪ್ರತಿ ವರ್ಷವೂ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸುತ್ತಿದ್ದೇವೆಂದು ಹೇಳಿದರು. ನಾನು ಕೇಳಿರುವ ಕೆಲವು ಗ್ರಾಮಗಳ ಜನರು ಎತ್ತಿನ ಬಂಡಿಗಳ ಮೇಲೆ ಕುಡಿಯುವ ನೀರನ್ನು ಬಹಳ ದೂರದಿಂದ ತರುತ್ತಿದ್ದಾರೆ. ಆದರೆ ಎತ್ತಿನ ಬಂಡಿಯೇ ಇಲ್ಲದಿರುವವರ ಗತಿ ಏನು ? ನಾನು ಕೇಳಿರುವ ಈ ಎಲ್ಲಾ ಗ್ರಾಮಗಳಲ್ಲೂ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಆದ್ದರಿಂದ ಈ ಎಲ್ಲಾ ಗ್ರಾಮಗಳಲ್ಲೂ ಕಿರು ನೀರು ಸರಬರಾಜು ಯೋಜನೆ ಮತ್ತು ಗ್ರಾಮಾಂತರ ನೀರು ಸರಬರಾಜು ಯೋಜನೆಗಳ ಕಾರ್ಯವನ್ನು ಕೈಗೊಂಡು ಜನರಿಗೆ ಕುಡಿಯಲು ನೀರನ್ನೊದಗಿಸುವ ವ್ಯವಸ್ಥೆ ಮಾಡಬೇಕಾಗಿ ವಿನಂತಿಸುತ್ತೇನೆ. ಮತ್ತೆ ಇಲ್ಲಿಯವರೆಗೆ ಕೆಲಸ ವಿಳಂಬ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕುಡಿಯುವ ನೀರಿನ ಸಲುವಾಗಿ ಹಣ ಮಂಜೂರಾತಿಯಾಗಿದ್ದರೂ ಕ್ರಮ ತೆಗೆದುಕೊಂಡಿಲ್ಲ, ಕೆಲಸ ಪೂರ್ಣವಾಗಿಲ್ಲವೆಂದು ಆರೋಪ ಮಾಡಿರುತ್ತಾರೆ, ಈ ವಿಚಾರ ಇದುವರೆವಿಗೂ ನನ್ನ ಗಮನಕ್ಕೆ ಬಂದಿರಲಿಲ್ಲ, ಈಗ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುತ್ತಾರೆ. ಇವತ್ತೇ ಈ ಬಗ್ಗೆ ಆದೇಶ ಕೊಡುತ್ತೇನೆ.

ಬೆಂಗಳೂರು ನಗರದಲ್ಲಿರುವ ಕೆ.ಎಂ. ಎಫ್ ಹಾಲು ಮಾರಾಟ ಮಳಿಗೆಗಳು

೮೬. ಶ್ರೀ ಪೆರಿಕಲ್ ಎಂ, ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಂಗಳೂರು ನಗರದಲ್ಲಿರುವ ಕೆ.ಎಂ.ಎಫ್. ಬೂತ್‌ಗಳ ಸಂಖ್ಯೆ :

ಬಿ) ಚಿಕ್ಕಪೇಟೆ ನಗರಸಭಾ ಕ್ಷೇತ್ರದಲ್ಲಿರುವ ಬೂತ್‌ಗಳ ಸಂಖ್ಯೆ :

ಸಿ) ಬೂತ್‌ಗಳ ನಿರ್ವಹಣೆಗಾಗಿ ಪ್ರತಿ ತಿಂಗಳು ಕೆ.ಎಂ.ಎಫ್.ನಿಂದ ತಗಲುವ ವೆಚ್ಚ ?

ಡಿ) ಬೂತ್‌ಗಳಿಂದ ಆಗುತ್ತಿರುವ ಲಾಭ ಅಥವಾ ನಷ್ಟ.

ಇ) ವರ್ಷದಲ್ಲಿ ಆಗುವ ಒಟ್ಟಾರೆ ನಷ್ಟದ ಬಗ್ಗೆ ವಿವರಿಸುವುದು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು).—

ಎ) ೧೨೧

ಬಿ) ೧ (ಬೂತ್ ಸಂಖ್ಯೆ : ೨೦೨)

ಸಿ) ಪ್ರತಿ ತಿಂಗಳು ರೂ. ೪೧೧೦-೮೦

ಡಿ) ೧೨೧ ಬಲ್ಕ್‌ವೆಂಡಿಂಗ್ ಬೂತ್‌ಗಳನ್ನು ನಿರ್ವಹಿಸುತ್ತಿರುವ ಮಾತೃ ಡೈರಿಯು ೧೯೮೯-೯೦ನೇ ಸಾಲಿನಲ್ಲಿ ೧೦ ತಿಂಗಳ ಅವಧಿಯಲ್ಲಿ (ಅಂದರೆ ೧-೪-೮೯ ರಿಂದ ೩೧-೧-೯೦ರವರೆಗೆ) ರೂ. ೪೦.೦೫ ಲಕ್ಷ ಲಾಭವನ್ನು ಗಳಿಸಿರುತ್ತದೆ. (ಪ್ರಾವಿಷನಲ್ ಲಾಭ ಮತ್ತು ನಷ್ಟ ತಃಖ್ತೆಯ ಪ್ರಕಾರ)

ಇ) ಪ್ರಶ್ನೆ (ಡಿ) ರಲ್ಲಿ ವಿವರಿಸಿದಂತೆ ಮಾತೃ ಡೈರಿಯು ಲಾಭ ಗಳಿಸುತ್ತಿರುವುದರಿಂದ ನಷ್ಟ ಉಂಟಾಗಿರುವುದಿಲ್ಲ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬೆಂಗಳೂರು ನಗರದಲ್ಲಿ ಒಟ್ಟು ೧೨೧ ಬಲ್ಕ್‌ವೆಂಡಿಂಗ್ ಹಾಲು ಸರಬರಾಜು ಬೂತ್‌ಗಳಿವೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಆವರೇಜ್ ೧೨ ಅಸೆಂಬ್ಲಿ ಕ್ಷೇತ್ರಗಳು ಬರುತ್ತವೆ. ಚಿಕ್ಕಪೇಟೆ ಕ್ಷೇತ್ರದಲ್ಲಿ ಒಂದು ಲಕ್ಷಕ್ಕೂ ಮಿಗಿಲಾಗಿ ಜನಸಂಖ್ಯೆ ಇರುತ್ತದೆ. ಹೆಚ್ಚಿಗೆ ಜನಸಂಖ್ಯೆ ಇರುವ ಈ ಕ್ಷೇತ್ರದಲ್ಲಿ ಒಂದೇ ಒಂದು ಬೂತ್‌ನಿಂದ ಹಾಲನ್ನು ಸಪ್ಲೈ ಮಾಡುತ್ತಿರುತ್ತಾರೆ ಜನಸಾಸ್ತಿ ಇರುವ ಕಡೆ ಹಾಲಿನ ಸರಬರಾಜು ಬೂತ್‌ಗಳನ್ನು ಜಾಸ್ತಿ ಮಾಡಬೇಕು. ಇದರಿಂದ ಬೇರೆ ಅಸೆಂಬ್ಲಿ ಕ್ಷೇತ್ರದಲ್ಲಿರತಕ್ಕ ಬೂತ್‌ಗಳಿಗೆ ಜನ ನಡೆದುಕೊಂಡು ಹೋಗಿ ಹಾಲನ್ನು ಕೊಂಡುಕೊಳ್ಳುವುದು ತಪ್ಪುತ್ತದೆಂದು ನಾನು ಹೇಳುತ್ತೇನೆ.